ಹಾಸನ ನಗರಸಭೆಯವರು ಮಳಿಗೆಗಳನ್ನು ಕಟ್ಟಿಸಲು ಹಾಸನ ಪಟ್ಟಣದಲ್ಲಿನ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಪೂರ್ವಾನುಮತಿ ಪಡೆಯಬೇಕಾಗಿರುವ ಬಗ್ಗೆ

1999: ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಪಟ್ಟಣದಲ್ಲಿ ''ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್'' ಇರುವುದರಿಂದ ಹಾಸನ ನಗರಸಭೆಯವರು ಮಳಿಗೆಗಳನ್ನು ಅಥವಾ ಇತರೆ ಕಟ್ಟಡಗಳನ್ನು ಕಟ್ಟಬೇಕಾದರೆ ಹಾಸನ ಸಿಟಿ ಟ್ರಸ್ಟ್ ಬೋರ್ಡ್‌ನ ಪೂರ್ವಾನುಮತಿ ಪಡೆಯಬೇಕಾಗಿರುವುದು ಕಡ್ಡಾಯ ಅಲ್ಲವೇ;

ಆ. ಈ ರೀತಿ ಪೂರ್ವಾನುಮತಿ ಪಡೆಯದೆ ಹಾಸನ ನಗರಸಭೆಯವರು ಕಟ್ಟಡ ಕಟ್ಟಿರುವುದು ಕಾನೂನುಬಾಹಿರ ಅಲ್ಲವೇ;

ಇ. ಇಂತಹ ಕಾನೂನು ಬಾಹಿರ ಕ್ರಮ ಮಾಡಿದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ''ಯೋಜನಾ ಪ್ರಾಧಿಕಾರ'' ದಿಂದ ಅನುಮೋದನೆ ಪಡೆಯಬೇಕಾಗುತ್ತದೆ.

ಆ. ''ಹಾಸನ ಅಭಿವೃದ್ಧಿ ಪ್ರಾಧಿಕಾರ'' ದಿಂದ ಅನುಮೋದನೆ ಪಡೆಯಲಾಗುತ್ತಿದೆ.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಅಂತರ್ಜಲ ಲಭ್ಯತೆಯ ಬಗ್ಗೆ

2073: ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸರ್ವೆ ಪ್ರಕಾರ ಎಷ್ಟು ಪ್ರಮಾಣದ ಅಂತರ್ಜಲ ಲಭ್ಯವಿದೆ; (ಅಂದರೆ ಎಷ್ಟು ಎಕರೆಗಳಿಗೆ ನೀರನ್ನು ಒದಗಿಸಬಹುದು) ಇದರ ಬಗ್ಗೆ ವೈಜ್ಞಾನಿಕ ಸರ್ವೆ ಆಗಿದೆಯೇ;

ಆ. ಹೆಚ್ಚು ಬೋರ್‌ಗಳನ್ನು ಹಾಕುವುದರಿಂದ ಭೂ ಅಂತರ್ಜಲ ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಇಂಥ ಬೋರ್‌ವೆಲ್‌ಗಳ ಪ್ರದೇಶದಲ್ಲಿ ಹೆಚ್ಚು ನೀರು ಬರುವಂತೆ ಮತ್ತು ಭೂಗರ್ಭ ಜಲಸಂಪತ್ತು ಹೆಚ್ಚುವಂತೆ ಏನು ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರವು ಆಲೋಚಿಸಿದೆ ?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ. ಇತ್ತೀಚಿನ ಅಂದಾಜಿನ ಪ್ರಕಾರ 15424 ದಶಲಕ್ಷ ಘನ ಮೀಟರ್‌ನಷ್ಟು ಅಂತರ್ಜಲವು ಪ್ರತಿವರ್ಷವೂ ಉತ್ಕರ್ಷವಾಗುತ್ತೆ. ಇದರಿಂದ ಸುಮಾರು 19.00 ಲಕ್ಷ ಎಕರೆಯನ್ನು ನೀರಾವರಿ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಈ ಬಗ್ಗೆ ಪ್ರಾಥಮಿಕ ಹಂತದ ವೈಜ್ಞಾನಿಕ ಸಮೀಕ್ಷೆ ಮಾಡಿದೆ.

ಆ. ಕೊಳವೆಬಾವಿಗಳ ಸಾಂದ್ರತೆ ಹೆಚ್ಚು ಇರುವ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಹೆಚ್ಚು ಆಳಕ್ಕೆ

ಹೋಗುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿಯ ಪ್ರದೇಶದ ಸವಿವರವಾದ ಭೂಜಲ ವೈಜ್ಞಾನಿಕ ಸಮೀಕ್ಷೆ ನಡೆಸಿ ಪ್ರತಿರೋಧಕ ಕ್ರಮಗಳು ಹಾಗೂ ಅಂತರ್ಜಲ ಕೃತಕ ಮರುಪೂರೈಕೆ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕೆ.ಎಸ್.ಎಫ್.ಸಿ. ಮತಿಯಿಂದ ನೀಡಿರುವ ಸಾಲದ ಮೊತ್ತ ಕುರಿತು

2031: ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ. ಮತಿಯಿಂದ ನೀಡಿರುವ ಸಾಲದ ಮೊತ್ತವೆಷ್ಟು ಹಾಗೂ ಅವುಗಳ ಹೆಸರುಗಳೇನು;

ಆ. ಕೆ.ಎಸ್.ಎಫ್.ಸಿ 2.00 ಲಕ್ಷಕ್ಕಿಂತ ಹೆಚ್ಚು ರೂ. ಬಾಕಿ ಕೊಡಬೇಕಾಗಿರುವ ಉದ್ಯಮಗಳ ವಿರುದ್ಧ ವಸೂಲಿಗಾಗಿ ತೆಗೆದುಕೊಂಡಿರುವ ಕ್ರಮವೇನು;

ಇ. ಸಬ್ಸಿಡಿ ಪಡೆದು ಇಂಡಸ್ಟ್ರಿಗಳನ್ನು ಹಾಳು ಮಾಡಿದ ಜನರ ವಿರುದ್ಧ ತೆಗೆದುಕೊಂಡ ಕಾನೂನಿನ ಕ್ರಮ ಹಾಗೂ ಇಂಥವರ ಯಾದಿಯನ್ನು ಪತ್ತಿಕೆಗಳಲ್ಲಿ ಪ್ರಕಟಿಸಿ ಈ ವ್ಯವಹಾರವನ್ನು ತಡೆಗಟ್ಟಲು ತೆಗೆದುಕೊಳ್ಳುವ ಕಾರ್ಯಕ್ರಮವೇನು ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ದಿನಾಂಕ 30.03.1992ರಂತೆ 192 ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಘಟಕಗಳಿಗೆ ಒಟ್ಟು 118.13 ಕೋಟಿ ರೂ.ಗಳನ್ನು ಅವಧಿ ಸಾಲವಾಗಿ ಮಂಜೂರಾತಿ ನೀಡಿರುತ್ತಾರೆ. ಘಟಕವಾರು ಮಂಜೂರು ಮಾಡಲ್ಪಟ್ಟ ಮೌಲ್ಯದ ವಿವರಗಳನ್ನು ಅನುಬಂಧ – 1ರಲ್ಲಿ ಲಗತ್ತಿಸಿದೆ.

ಆ. ಕೆ.ಎಸ್.ಎಫ್.ಸಿ.ಯು ಬಾಕಿ ಕೊಡಬೇಕಾಗಿರುವ ಉದ್ಯಮಗಳ ಬಾಕಿ ವಸೂಲಿಗಾಗಿ ಉಪಯೋಗಿಸುವ ಕ್ರಮಗಳನ್ನು ಈ ಕೆಳಗೆ ವಿವರಿಸಲಾಗಿದೆ:

1. ಸಂಸ್ಥೆಯ ವಸೂಲಾತಿ ವಿಭಾಗದವರು ಆಗಿಂದಾಗ್ಗೆ ಕೊಟ್ಟ ಸಾಲದ ಮರುಪಾವತಿಗೆ, ಕೈಗಾರಿಕೆಗಳಿಗೆ ಖುದ್ದಾಗಿ, ಭೇಟಿ ನೀಡುವ ಮೂಲಕ ಕಂತುಗಳ ಮರುಪಾವತಿ ವಿಧಾನವನ್ನು ತಿಳಿಸಲಾಗುವುದು.

2. ಮರುಪಾವತಿ ಮಾಡುವ ಬಗ್ಗೆ ಜ್ಞಾಪನ ಪತ್ರ ಮುಖೇನ ಕಂತು ಕಟ್ಟಲು ಶೀಘ್ರ ಕ್ರಮ ಕೈಗೊಳ್ಳಲು ತಿಳಿಸಲಾಗುವುದು.

3. ಮೇಲಿನ ಎರಡು ಕ್ರಮಗಳಿಗೂ ಉದ್ದಿಮೆದಾರರಿಂದ ಸೂಕ್ತ ಪ್ರತಿಕ್ರಿಯೆ ಬರದಿದ್ದರೆ ಅವರುಗಳನ್ನು ''ಸುಸ್ತಿ ಬಾಕಿ ಪರಿಶೀಲನಾ ಸಮಿತಿಯ'' (ಡಿ.ಆರ್.ಸಿ.) ಮುಂದೆ ಹಾಜರುಪಡಿಸಿ ಹಣ ಮರುಪಾವತಿ ಮಾಡಲು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲಾಗುವುದು. ಈ ಸಮಸ್ಯೆಗಳು ಯಥಾರ್ಥವೆಂದು ಕಂಡು ಬಂದರೆ ಸಂಸ್ಥೆಯು ಆ ಘಟಕವನ್ನು ಅಸ್ವಸ್ಥ ಘಟಕವೆಂದು ಭಾವಿಸಿ ಪರಿಷ್ಕೃತ ಮರುಪಾವತಿ ವಿಧಾನ ಹಾಗೂ ಪುನರ್ವಸತಿಯನ್ನು ಕಲ್ಪಿಸುತ್ತದೆ.

4. ಸಂಸ್ಥೆಯು ಈ ಎಲ್ಲಾ ಕ್ರಮ ಕೈಗೊಂಡ ನಂತರವೂ ಬಾಕಿ ಹಣ ಮರುಪಾವತಿ ಮಾಡದಿದ್ದಲ್ಲಿ ಅವರ ಮೇಲೆ ಕಾನೂನಿನ ಕ್ರಮವಾಗಿ ಷೋಕಾಸ್ ನೋಟೀಸ್‌ನ್ನು ಬಾಕಿ ಮರುಪಾವತಿ ಮಾಡಲು ಜಾರಿ ಮಾಡಲಾಗುತ್ತದೆ.